ಅಂತ ಆಯಿ ದೊಡ್ಡ ದನಿ ಮಾಡಿ ರಂಪಾಟ ಮಾಡಿದ ಹಾಗೆ ಅನ್ನಿಸುತ್ತದೆ. ಕನಸಿನಲ್ಲಿ ಬಾವಿಕಟ್ಟೆಯ ಬಳಿ ಆ ಕಡೆ ಮುಖ ಮಾಡಿ ನಿಂತ ಬಾಪಾ ಎಷ್ಟು ಕರೆದರೂ ಈ ಕಡೆ ಹೊರಳುವುದಿಲ್ಲ. “ಆಯಿ ಚಿಂತಿಲ್ಲ. ಮಾಧವಿ ಅದಾಳ...” ಅಂತ ಅಣ್ಣ ಹಿರೇರ ಹಬ್ಬದ ದಿನ ಕೂಡಿದ ಸಂಬಂಧಿಕರ ಎದ್ರು ಕಂಠತುಂಬಿ ಹೇಳ್ತಾನ. ಆಯಿಗಾತು, ಆಕಿ ಹಿಂದಿನ ನನಗಾತು ಕಡೆಗಾಲದಾಗ ಬೇಕಲ್ಲಾ ಅಂತ ಮತ್ತದೇ ಗಾಣಕ್ಕೆ ಕುತ್ತಿಗೆ ಕೊಡುತ್ತಾಳೆ. ಮುಖ್ಯ ಅವಳಿಗೆ, ಇದನ್ನೂ ಬಿಟ್ಟರ ನನ್ನದೂ ಅಂತ ಏನದ? ಎಂಬ ಪ್ರಶ್ನೆಯೂ ಕಾಡುತ್ತಿದೆ. ಅದೇ ಆಗ, ನೌಕರಿ ಅಂತ ಬಂದಾಗ, “ಅಯ್ಯ, ನನ್ನ ವಾರಿಗಿಯವ್ರಿಗss ನಾ ಪಾಠ ಮಾಡಬೇಕ?'' ಅನ್ನೋ ಗಾಬರಿಯಿತ್ತು, ಧಿಮಾಕಿತ್ತು. ಈಗಿವನ್ನ ನೋಡಿದರೆ, ಪಾಪ, ಸಣ್ಣ ಮಕ್ಳು ಅನ್ನತಾರ. ಅದ್ಯಾವ ಮಾಯಕದಲ್ಲಿ ಚೌಕಟ್ಟಿನೊಳಗಿನ ಪಟ ಬದಲಾಗಿ ಹೋಯಿತೋ? ‘‘ಮೇಡಂ, ನೀವ್ ಯಾಕ್ರೀ ಯಾವಾಗ್ಲೂ ಸೀರಿಯಸ್ಸಾಗಿರ್ತೀರಿ?’’– ಎಂತದೋ ಆಪ್ತತೆಯಲ್ಲಿ ಅಯಾಚಿತವಾಗಿ ಹುಡುಗಿಯೊಬ್ಬಳು ಕೇಳಿಬಿಡುತ್ತಾಳೆ. ‘‘ಇಲ್ಲಪ್ಪ, ನಾನಿರೋದೇ ಹೀಗೆ’’ ಅಂತ ತೇಲಿಸಿದ್ದಾಳೆ ಮಾಧವಿ. ಆದರೆ, ಇಡೀ ದಿನ ಆ ಪ್ರಶ್ನೆ ಅವಳನ್ನ ನೆತ್ತಿಯಿಂದ ಉಂಗುಷ್ಟದವರೆಗೆ ತಿರುತಿರುಗಿ ಮುರಿದು ತಿನ್ನುತ್ತದೆಂದು ಆ ಮಕ್ಕಳಿಗೇನು ಗೊತ್ತು? ‘ಈ ಮಕ್ಕಳಿವೆ ಅಂತ ಆಗಿದೆ’ ಮಾಧವಿ ತನ್ನಷ್ಟಕ್ಕೆ ಕೆಲವೊಮ್ಮೆ ಒಳಗೇ, ಕೆಲವೊಮ್ಮೆ ಖೋಲಿಯ ಗೋಡೆಗಳಿಗೆ ಹೊಡೆದು ಹೊರಳಿಬರುವಷ್ಟು ದೊಡ್ಡದಾಗಿ ಹೇಳಿಕೊಳ್ಳುತ್ತಾಳೆ. ಮಾಧವಿ ಈಗೀಗ ಬೆಚ್ಚಿಬೀಳುವುದಿದೆ. ತನಗೆ ಹುಚ್ಚೇನೂ ಹಿಡಿದಿಲ್ಲವಲ್ಲ? ಹೀಗೆ ಜೋರು ಜೋರು ಒಬ್ಬಳೇ ಮಾತಾಡಿಕೊಳ್ಳುವುದು ದೊಡ್ಡವಾಡ ಸರ್ ಅಂಥವರಿಗೇನಾದ್ರೂ ಗೊತ್ತಾದರೆ ಹೇಗಿರಬೇಡ ಕಥೆ? ಅಥವಾ ಈ ರೋಗ ಬಲಿತು, ತಾನು ಕಾಲೇಜ್‌ನಲ್ಲಿಯೇ ಹೀಗೆಲ್ಲ ಜೋರಾಯಿಸಿ ಮಾತಾಡಿ, ಇಷ್ಟು ಕಾಲ ಮುಖಕ್ಕೆ ಹೊಡೆದುಕೊಂಡಿದ್ದ ತಾಮ್ರದ ತಗಡು ಕಳಚಿ ಬೀಳುವಂತಾದರೆ... ಮೊದಲೇ ಒಂದು ನೆನಪು ಮೀಟಿದರೆ ಸಾಕು, ಹಿಂಗಾಲಿನಲ್ಲಿ ಗುಡ್ಡ ಏರುವವರ ಹಾಗೆ ಏದುಬ್ಬಸಗೊಂಡು ಅಲೆದು ಮನಸ್ಸು ನಿತ್ರಾಣಗೊಂಡು ಬಿಡುತ್ತದೆ. ಆ ರೋಗಕ್ಕೆ ಇದೂ ಸೇರಿ, ಕಡೆಗಾಲಕ್ಕೆ ಮೆಂಟಲ್ ಆಸ್ಪತ್ರೆಯ ಬೆಡ್ ನಂಬರೊ, ಖೋಲಿ ನಂಬರೋ ಆಗದಿದ್ದರೆ ಸಾಕಪ್ಪಾ ಎಂದು ಗದಗುಟ್ಟಿದ್ದಳು.

ಅದೆಲ್ಲಿದ್ದರೋ ದೊಡ್ಡವಾಡ ಸರ್, ‘‘ಅಯ್ಯ ಇದೊಳ್ಳೆ ಅಂತೀನಿ. ಮೇಡಂನೋರೆ ಇಲ್ಲದೀರಿ? ಆಗೊಮ್ಮೆ ಮಾತಾಡ್ಸದೆ ಸುದ್ದಿಲ್ಲ. ಈಗೂ ಉಸರಿಲ್ಲ, ಏನಾಗಾಕ ಹತ್ತೈತಿ? ಅಲ್ರೀ ಕಾಲೇಜ್ನ ಹುಡುಗೀರ ವಿಷ್ಯ ನಿಂ ಗಮನಕ್ಕೆ ತನ್ರೀ ಅಂತ ಹೇಳ್ಯಾರ ಹೌದಿಲ್ಲೊ. ಅಕಾ, ಬರ್ರಿಲ್ಲೆ, ನೋಡ್ರಿ, ಮುಂಜಾನಿಂದ ಆಕಿ ಭಾಗೀರಥಿ ಆ ಮ್ಯಾಗಿನ ಹೌದದ ಸಂದ್ಯಾಗ ಹಾಂಗss ಕುಂತಾಳ. ನಂಗ ಸುದ್ದಿ ಬಂತು. ನಾ ಹೋಗಾದು ಸರೀಗಿಲ್ಲ. ಜರಾ ನೀವ ಹೋಗಿ ಮಾತಾಡ್ಸಿ ಕರಕಂಬರ್ರಿ. ಫೋನ್ ಹಿಡಕಂಡ ಹೋಗ್ರಿ. ಮೊದ್ಲು ಆಕೀನ ಅಲ್ಲಿಂದ ಕೆಳಗಿಳಿಸ್ರಿ. ಅವ್ರ ಮನ್ಯಾಗ ಸುದ್ದಿ ತಿಳ್ಸಾಣು... ತಥ್, ಈ ಹೆಣ್ಣುಡ್ರ ವಿಷ್ಯ ತಲಕೆಟ್ಟಹೋದಾತು.” ದೊಡ್ಡವಾಡ ಸರ್ ಮಾತಿಗೆ ಮಾಧವಿ ಮೇಡಂ ಈ ಜಗತ್ತಿನ ಈ ಕ್ಷಣದ ಸ್ಟಾಫ್‌ರೂಂಗೆ ಇಳಿದಳು. ಕಾಲೇಜು ಕಟ್ಟಡದ ಕೆಲಸ ನಡೆದಿದೆ. ಇಂದು ಮಂಗಳವಾರ ಕೆಲಸದವರಿಲ್ಲ, ಅಷ್ಟೇ. ಮೂರನೇ ಮಹಡಿಯ ತಲೆಮೇಲಿರುವ ನೀರಿನ ಟ್ಯಾಂಕು. ಅಲ್ಲಿ ಕುಳಿತಿರುವ ಹುಡುಗಿ ಯಾರೋ? ಭಾಗೀರಥಿಯಂತೆ. ನೆನಪಾಗುವುದಿಲ್ಲ ಮುಖ. ವಿದ್ಯಾರ್ಥಿಗಳೆಲ್ಲ ಮನೆಗೆ ಹೋದ ಬಿಸಿಲು ಮಧ್ಯಾಹ್ನ, ದೇವರೇ, ಅನ್ನಿಸಿತು ಮಾಧವಿಗೆ. ಈಗೀಗ ಮೆಟ್ಟಿಲು ಹತ್ತಲು ತೊಡೆ ನೋಯುತ್ತದೆ, ಆದರೂ...

ಹೌದು ಕುಳಿತಿದ್ದಾಳೆ. ಎರಡು ನೀರಿನ ಟ್ಯಾಂಕಿನ ನಡೂ ಸಂದಿಯಲ್ಲಿ. ಯಾವುದೋ ಅನೂಹ್ಯ ಅಪ್ಪುಗೆಯಲ್ಲಿ ವಾಲಿಕೊಂಡವಳಂತೆ. ‘‘ಭಾಗೀರಥಿ’’ ಅಂದರೆ ಮುಖವೆತ್ತಿ ರೆಪ್ಪೆ ಪಿಳುಕಿಸಿದಳು. ಅಳುತ್ತಿರಲಿಲ್ಲ. ಹೆಣದ ಮುಂದೆ ಕೂತವಳಂತಿದ್ದಳು. ನಿಧಾನ ಅವಳ ಭುಜವೊತ್ತಿದಳು ಮಾಧವಿ. ಆ